ಉ) ಆ ಗ್ರಾಮಗಳಿಗೆ ಬೀದಿ ದೀಪಗಳನ್ನು ಒದಗಿಸಲು ಬೇಕಾಗಿರುವ ಕಾಲಾವಧಿ ಎಷ್ಟು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):

ಅ) ಬಂದಿದೆ.

ಆ) 16.20 ಲಕ್ಷ ರೂ.ಗಳು.

ಇ) ಈ ಬೀದಿ ದೀಪಗಳನ್ನು ದುರ್ಗಮ ಗ್ರಾಮಗಳಲ್ಲಿ ಅಂದರೆ ಅರಣ್ಯ ಪ್ರದೇಶ, ಗುಡ್ಡಗಾಡಿನ ಪ್ರದೇಶ ಸ್ಥಾಪಿಸಿರುವುದರಿಂದ ಇವುಗಳ ನಿರ್ವಹಣ ಕಾರ್ಯವನ್ನು ಮಾಡುವುದು ಕಠಿಣವಾದ ಕೆಲಸ. ಹೀಗಾಗಿ ಈ ಬೀದಿ ದೀಪಗಳು ಅವುಗಳ ನಿರೀಕ್ಷಿತ ಜೀವನ ಅವಧಿಗೆ ಮುಂಚಿತವಾಗಿಯೇ ಹಾಳಾದವು. ಇದಕ್ಕೆ ಯಾರೂ ಜವಾಬ್ದಾರರಲ್ಲ.

ಈ) ಈ ಸೋಲಾರ್ ಬೀದಿ ದೀಪಗಳನ್ನು ಸರಿಪಡಿಸುವ ವಿಷಯದಲ್ಲಿ ಮಂಡಳಿಯು ಆಸಕ್ತಿ ಹೊಂದಿದೆ. ಸಂಸ್ಥೆಯು ನೀಡಿರುವ ಪ್ರಸ್ತಾವನೆ ಮಂಡಳಿಯ ಪರಿಶೀಲನೆಯಲ್ಲಿದೆ.

ಉ) ಈ ಬೀದಿ ದೀಪಗಳನ್ನು ದುರ್ಗಮ ಸ್ಥಳಗಳಲ್ಲಿ ಅಂದರೆ ಅರಣ್ಯ ಪ್ರದೇಶ, ಗುಡ್ಡಗಾಡಿನ ಪ್ರದೇಶಗಳಲ್ಲಿರುವ ಗ್ರಾಮ, ಉಪಗ್ರಾಮಗಳಲ್ಲಿ ಸ್ಥಾಪಿಸಿರುವುದರಿಂದ, ಬೀದಿ ದೀಪಗಳನ್ನು ಸರಿಪಡಿಸುವ ಕಾರ್ಯವನ್ನು ಪೂರ್ಣಗೊಳಿಸಲು ಕೆಲವು ತಿಂಗಳುಗಳೇ ಬೇಕಾಗುವುದು.

ರೇಷ್ಮೆ ಬೆಳೆ ಅಭಿವೃದ್ಧಿ

657 - ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ): ಮಾನ್ಯ ರೇಷ್ಮೆ ಖಾತೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆ ಬೆಳೆಯ ಅಭಿವೃದ್ಧಿಯಿಂದಾಗಿ ಇಲಾಖೆ ದೊಡ್ಡದಾಗುತ್ತಿದ್ದು ದಕ್ಷತೆ ಮತ್ತು ಪ್ರಾಮಾಣಿಕತೆ ಕ್ಷೀಣಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಹಾಗಿದ್ದಲ್ಲಿ, ಈ ಇಲಾಖೆಯಲ್ಲಿ ಹೆಚ್ಚಿನ ದಕ್ಷತೆಯನ್ನು ಮೂಡಿಸಲು ಸರ್ಕಾರವು ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳು ಯಾವುವು?

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು):

ಅ) ಬಂದಿಲ್ಲ.

ಆ) ಉದ್ಭವಿಸುವುದಿಲ್ಲ.

ರೇಷ್ಮೆ ಮಾರುಕಟ್ಟೆ ಬಗ್ಗೆ

658 - ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ): ಮಾನ್ಯ ರೇಷ ಖಾತೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಮನಗರ ರೇಷ್ಮೆ ಮಾರುಕಟ್ಟೆಯು ದೇಶದಲ್ಲಿ ಅತಿ ದೊಡ್ಡ ಮಾರುಕಟ್ಟೆಯಾಗಿದ್ದು ಪ್ರತಿದಿನ ಸರಾಸರಿ 30,000 ಕೆ.ಜಿ. ರೇಷ್ಮೆ ಗೂಡಿನ ವಹಿವಾಟು ಇರುವುದರಿಂದ ಇಲ್ಲಿ ಒಂದು ರೇಷ್ಮೆ ಕಾರ್ಖಾನೆಯನ್ನು ಪ್ರಾರಂಭಿಸಲು ಸರ್ಕಾರದವರು ತೀವ್ರವಾಗಿ ಪರಿಶೀಲಿಸುವುದೇ?

ಆ) ಹಾಗಿದ್ದಲ್ಲಿ, ಎಷ್ಟು ದಿನಗಳ ಒಳಗಾಗಿ ಕಾರ್ಖಾನೆಯನ್ನು ಸ್ಥಾಪಿಸಲಾಗುವುದು.

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು):

ಅ) ರೇಷ್ಮೆ ಕಾರ್ಖಾನೆಯನ್ನು ಪ್ರಾರಂಭಿಸುವ ಆಲೋಚನೆ ಸರ್ಕಾರಕ್ಕೆ ಇಲ್ಲ.

ಆ) ಉದ್ಭವಿಸುವುದಿಲ್ಲ.